**ಕರ್ನಾಟಕ ಸರ್ಕಾರ**

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ5[1]ಅಧೀ:ಬಡ್ತಿ:01/2014-15 ದಿನಾಂಕ: 29-09-2014

## : ಜ್ಞಾ ಪ ನ :

**ವಿಷಯ**: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರ.ದ.ಸಹಾಯಕರು/ಶೀಘ್ರಲಿಪಿಗಾರರಿಗೆ ಅಧೀಕ್ಷಕರ ಹುದ್ದೆಗೆ ಸ್ಥಾನಾಪನ್ನ ಬಡ್ತಿ ನೀಡುವ ಬಗ್ಗೆ.

**ಉಲ್ಲೇಖ**: ಸರ್ಕಾರದ ಅಧಿಸೂಚನೆ ಸಂ.ಡಿಪಿಎಆರ್:12:ಎಸ್‌ಡಿಇ:2007, ದಿ:29.01.2008.

2] ಸರ್ಕಾರದ ಸುತ್ತೋಲೆ ಸಂ:ಇಡಿ:250:ಡಿಪಿಐ:2006, ದಿನಾಂಕ.22.02.2008.

3] ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಸಿ5[1]ಪ್ರ.ದ.ಸ:ಜೇಷ್ಠತೆ:10:2011-12 ದಿನಾಂಕ:01.08.2012.

4] ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಸಿ5[2]ಶೀ.ಲಿ.ಜೇ.ಪ:09:2011-12 ದಿ:04.11.2011.

5] ದಿನಾಂಕ:25-8-2014ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡಾವಳಿ.

**ಪ್ರಸ್ತಾವನೆ:**

ಉಲ್ಲೇಖ [1] ಮತ್ತು [2]ರ ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳನ್ವಯ ಬೆಂಗಳೂರು ಆಯುಕ್ತರ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಾದ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಥಮ ದರ್ಜೆ ಸಹಾಯಕರುಗಳ ಮತ್ತು ಶೀಘ್ರಲಿಪಿಗಾರರ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಉಲ್ಲೇಖ [3] ಮತ್ತು [4]ರಂತೆ ಪ್ರಕಟಿಸಲಾಗಿದೆ. ಈ ವೃಂದದ ನೌಕರರುಗಳಿಗೆ ಅಧೀಕ್ಷಕರ ಹುದ್ದೆಗಳಿಗೆ ಸ್ಥಾನಾಪನ್ನ ಬಡ್ತಿ ನೀಡುವ ಬಗ್ಗೆ ಸಲ್ಲಿಸಿದ್ದ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಧೀಕ್ಷಕರ ಹುದ್ದೆಗಳನ್ನು 35:1ರ ಅನುಪಾತದಂತೆ ಕ್ರಮವಾಗಿ ಪ್ರ.ದ.ಸ ಹಾಗೂ ಶೀಘ್ರಲಿಪಿಗಾರರ ವೃಂದಗಳಿಗೆ ವರ್ಗೀಕರಿಸಲಾಗಿದೆ. ಉಲ್ಲೇಖ(5)ರ ಇಲಾಖಾ ಮುಂಬಡ್ತಿ ಸಭೆ ನಡಾವಳಿಯಂತೆ 61 ಮಂದಿಗೆ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡಲು ತೀರ್ಮಾನಿಸಲಾಗಿತ್ತು. ಅದರಂತೆ ದಿನಾಂಕ:09-09-2014ರಂದು 45 ಅಭ್ಯರ್ಥಿಗಳಿಗೆ ಹಾಗೂ 18-09-2014ರಂದು 09 ಪ್ರಥಮ ದರ್ಜೆ ಸಹಾಯಕರು/ಶೀಘ್ರಲಿಪಿಗಾರರಿಗೆ ಕೌನ್ಸಿಲಿಂಗ್ ನಡೆಸಿದ್ದು, 39 ಮಂದಿ ಸ್ಥಳ ಆಯ್ಕೆ ಮಾಡಿಕೊಂಡು, ಉಳಿಕೆ ಇದ್ದ 06 ಅಧೀಕ್ಷಕರ ಖಾಲಿ ಹುದ್ದೆಗಳಿಗೆ ದಿನಾಂಕ:26-09-2014ರಂದು 07 ಮಂದಿಗೆ ಕೌನ್ಸಿಲಿಂಗ್ ನಡೆಸಲಾಯಿತು.

ಪ್ರಸ್ತುತ ಖಾಲಿ ಇರುವ ಅಧೀಕ್ಷಕರ ಹುದ್ದೆಗಳನ್ನು ಅರ್ಹ ಪ್ರಥಮ ದರ್ಜೆ ಸಹಾಯಕರುಗಳಿಗೆ ಜೇಷ್ಠತೆ ಮತ್ತು ಮೀಸಲಾತಿ ನಿಯಮಗಳನ್ವಯ ಸ್ಥಾನಾಪನ್ನ ಬಡ್ತಿ ನೀಡಿ ತುಂಬಲು ಪರಿಶೀಲಿಸಿ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ:**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಆಯುಕ್ತರ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ 06 ಪ್ರಥಮ ದರ್ಜೆ ಸಹಾಯಕರು / ಶೀಘ್ರಲಿಪಿಗಾರರಿಗೆ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಕಂಡ ಷರತ್ತುಗಳೊಂದಿಗೆ ಜೇಷ್ಠತೆ ಮತ್ತು ಮೀಸಲಾತಿ ನಿಯಮಗಳನ್ವಯ ಅಧೀಕ್ಷಕರ ಹುದ್ದೆಯ ವೇತನ ಶ್ರೇಣಿ ರೂ. 20,000-36,300 ರಲ್ಲಿ ಸ್ಥಾನಾಪನ್ನ ಬಡ್ತಿ ನೀಡಿ, ದಿನಾಂಕ:26-09-2014ರಂದು ನಡೆದ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ನೌಕರರು ಸ್ವತ: ಸ್ಥಳ ಆಯ್ಕೆ ಮಾಡಿಕೊಂಡಂತೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಅಧಿಕಾರಿ/ ನೌಕರರ ಹೆಸರು ಮತ್ತು ಕಾರ್ಯ ನಿರ್ವಹಿಸುತ್ತಿರುವ ಶಾಲಾ ಕಾಲೇಜು /ಕಛೇರಿ ಪೂರ್ಣವಿಳಾಸ | ಅಧೀಕ್ಷಕರ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ |
|---|---|---|
| 1. | ಆರ್.ಶಾರದಮ್ಮ, ಪ್ರ.ದ.ಸ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ, ಚಿತ್ರದುರ್ಗ [ತಾಲ್ಲೂಕು], ಚಿತ್ರದುರ್ಗ ಜಿಲ್ಲೆ. | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ದಕ್ಷಿಣ ವಲಯ-4, ಕೆ.ಆರ್.ಪುರಂ, ಬೆಂಗಳೂರು |
| 2. | ಗಂಗಾಧರಯ್ಯ, ಪ್ರ.ದ.ಸ, ಅಕ್ಷರ ದಾಸೋಹ ತಾಲ್ಲೂಕು ಪಂಚಾಯತ್, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ. | ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಡಿಕೇರಿ |

| | | |
|---|---|---|
| 3. | ವಿ.ಸೂರ್ಯಕಲ, ಪ್ರ.ದ.ಸ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉತ್ತರ ವಲಯ-4, ಯಲಹಂಕ, ಬೆಂಗಳೂರು | *ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೈಂದೂರು, ಉಡುಪಿ ಜಿಲ್ಲೆ* |
| 4. | ಅನಂತರಾಮ್ ಗೌತಮ್, ಪ್ರ.ದ.ಸ, ಎಸ್.ಜಿ.ಟಿ.ಸರ್ಕಾರಿ ಪದವಿ ಪೂರ್ವ ಕಾಲೇಜು, ತಳಕು, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. | *ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, [ಡಯಟ್] ಕೂಡಿಗೆ, ಕೊಡಗು ಜಿಲ್ಲೆ* |
| 5. | ಕೆ.ಎಂ. ಬುಳ್ಳಮ್ಮ, ಪ್ರ.ದ.ಸ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ಬೆಂಗಳೂರು. | *ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ವಿರಾಜಪೇಟೆ, ಕೊಡಗು ಜಿಲ್ಲೆ* |
| 6. | ಟಿ.ರೇವಣಸಿದ್ದೇಶ್ವರ, ಪ್ರ.ದ.ಸ, ಸರ್ಕಾರಿ ಪ್ರೌಢಶಾಲೆ, ಜೆ.ಎನ್.ಕೋಟೆ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ | *ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಡಿಕೇರಿ* |

***ಷರತ್ತುಗಳು:***

***01.*** ನೌಕರರು ಅಧೀಕ್ಷಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಅಧೀಕ್ಷಕರ ಹುದ್ದೆಯಲ್ಲಿ ಕ.ನಾ.ಸೇ.ನಿಯಮ 42[ಬಿ] ಅನ್ವಯ ವೇತನ ನಿಗಧಿಗೆ ಅರ್ಹರಿರುತ್ತಾರೆ.

***02.*** ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವ ಬಗ್ಗೆ ಕಛೇರಿ ಮುಖ್ಯಸ್ಥರು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

***03.*** ಈ ನೌಕರರ ಮೇಲೆ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ. ಅಲ್ಲದೆ ಸರ್ಕಾರಿ ನೌಕರನ ವಿರುದ್ಧ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ಪ್ರಾರಂಭವಾಗಿ ಅಂತಹ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ದಂಡನೆಯಲ್ಲಿ ಪರ್ಯಾವಸಾನಗೊಂಡಿದ್ದಲ್ಲಿ, ಆ ದಂಡನೆಯು ಜಾರಿಯಲ್ಲಿರುವ ಅವಧಿಯಲ್ಲಿ ಅಂತಹ ಸರ್ಕಾರಿ ನೌಕರರಿಗೆ ಮುಂಬಡ್ತಿ ಹೊಂದಲು ಅಸ್ಪದವಿಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ. ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಬಿಡುಗಡೆ ಮಾಡುವ ಮುನ್ನ, ಇದನ್ನು ಖಚಿತಪಡಿಸಿಕೊಳ್ಳುವುದು.

***04.*** ಈ ಎಲ್ಲಾ ಅಂಶಗಳನ್ನು ಕಛೇರಿ ಮುಖ್ಯಸ್ಥರು ಪರಿಶೀಲಿಸಿ ಸ್ಥಾನಾಪನ್ನ ಬಡ್ತಿ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಲು ಕ್ರಮ ವಹಿಸಿ ಈ ಕಛೇರಿಗೆ ವರದಿ ಮಾಡತಕ್ಕದ್ದು.

***05.*** ಮೇಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಷರತ್ತುಗಳು ಪೂರೈಕೆ ಆಗದಿದ್ದಂತಹ ನೌಕರರುಗಳನ್ನು ಸ್ಥಾನಾಪನ್ನ ಬಡ್ತಿಗೆ ಪರಿಗಣಿಸಬಾರದೆಂದು ಸ್ಪಷ್ಟಪಡಿಸಿದೆ.

***06.*** ಸಂಬಂಧಿಸಿದ ಕಛೇರಿ ಮುಖ್ಯಸ್ಥರುಗಳು ಸಂಬಂಧಿಸಿದ ನೌಕರರನ್ನು ಸಕಾಲದಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸುವುದು.

***07.*** ಬಡ್ತಿ ಹೊಂದಿ ಸ್ಥಳ ನಿಯುಕ್ತಿಗೊಳಿಸಿರುವ ನೌಕರರು ಸ್ಥಳ ನಿಯುಕ್ತಿಗೊಳಿಸಿರುವ ಕಚೇರಿಯಲ್ಲಿ ಈ ಆದೇಶ ತಲುಪಿದ 15 ದಿನಗಳ ಒಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಯಮಾನುಸಾರ ಬಡ್ತಿಯನ್ನು ರದ್ದುಪಡಿಸಲಾಗುವುದು.

***08.*** ನೌಕರರ ಬಿಡುಗಡೆ ಮತ್ತು ಸೇರ್ಪಡೆ ಬಗ್ಗೆ ತಪ್ಪದೆ ಈ ಕಛೇರಿಗೆ ವರದಿ ಸಲ್ಲಿಸುವುದು.

(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

*[ಎನ್. ಚಂದ್ರಶೇಖರ್]*
ಜಂಟಿ ಆಯುಕ್ತರು(ಆಡಳಿತ)

***ಇವರಿಗೆ:***

***01.*** ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.

***02.*** ಕಾರ್ಯದರ್ಶಿ ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾ.ಶಿ.ಇಲಾಖೆ ಮೈಸೂರು ವಿಭಾಗ

***03.*** ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.

***04.*** ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಭೇತಿ ಸಂಸ್ಥೆಯ ಪ್ರಾಂಶುಪಾಲರುಗಳಿಗೆ.

***05.*** ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.

***06.*** ಸಹನಿರ್ದೇಶಕರು [ಆಡಳಿತ] ರವರ ಆಪ್ತ ಶಾಖೆಗೆ.

***07.*** ಸಂಬಂಧಿಸಿದ ಕಛೇರಿ : ಶಾಲಾ ಕಾಲೇಜು ಮುಖ್ಯಸ್ಥರುಗಳಿಗೆ

***08.*** ಸಂಬಂಧಿಸಿದ ನೌಕರರುಗಳಿಗೆ..